**ಓ ಎಸ್ ನಂಃ 403/2014**

**ಪಿ. ಡಬ್ಲ್ಯೂ ಃ 1**

**ದಿಃ 05.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎನ್ ಎಸ್ ವಕೀಲರಿಂದ ಃ**

ನಮ್ಮ ತಂದೆ ತಾಯಿಗೆ ನಾನು ಮತ್ತು ನನ್ನ ತಂಗಿ ಇಬ್ಬರೆ ಮಕ್ಕಳಿರುತ್ತೇವೆ. ನನ್ನ ತಂಗಿಯ ಹೆಸರು ಹೇಮಲತಾ ಇರುತ್ತದೆ. ನನ್ನ ಪ್ರಮಾಣಪತ್ರದಲ್ಲಿ ಆಂಜನಪ್ಪ ಮತ್ತು ಸುಜಾತ ಇವರಿಗೆ ನಾನು ಒಬ್ಬನೇ ಮಗ ಎಂದು ಬರೆಯಿಸಿದ್ದೇನೆ ಎಂದರೆ ಸರಿ. ಹೇಮಲತಾ ಇವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ನಮ್ಮ ಮುತ್ತಾತ ದ್ಯಾವಲಿಂಗಯ್ಯ ಇವರಿಗೆ 3 ಜನ ಗಂಡು ಮಕ್ಕಳು ಅವರುಗಳೆಂದರೆ ಈರಯ್ಯ, ನಿಂಗಯ್ಯ ಮತ್ತು ಗಂಗಯ್ಯ ಹೆಣ್ಣು ಮಕ್ಕಳ ಪರಿಚಯ ಇಲ್ಲ. ದ್ಯಾವಲಿಂಗಯ್ಯ ಇವರಿಗೆ ಸಣ್ಣ ಹನುಮಕ್ಕ ಮತ್ತು ಗಂಗಹನುಮಕ್ಕ ಎಂಬ ಹೆಣ್ಣು ಮಕ್ಕಳಿದ್ದರು ಎಂದರೆ ನನಗೆ ಅವರುಗಳ ಹೆಸರುಗಳು ಗೊತ್ತಿಲ್ಲ ಎಂದು ಸಾಕ್ಷಿ ಗೊತ್ತಿಲ್ಲ. ಅದರಲ್ಲಿ ಒಬ್ಬರ ಮದುವೆ ಮೋಟಗಾನಹಳ್ಳಿಗೆ ಆಗಿತ್ತು ಎಂದರೆ ಸರಿ. ಗಂಗಹನುಮಕ್ಕ ಇವರ ಮದುವೆಯನ್ನು ದಾಸನಪುರ ಹೋಬಳಿ, ರಾವುತ್ತನಹಳ್ಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಸಣ್ಣಹನುಮಕ್ಕ ಮತ್ತು ಗಂಗಹನುಮಕ್ಕ ಇವರ ವಾರಸುದಾರರನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ.

ನಮ್ಮ ದೊಡ್ಡ ತಾತ ಈರಯ್ಯ ಎಂದರೆ ಸರಿ. ಅವರಿಗೆ ಇಬ್ಬರು ಗಂಡು ಮಕ್ಕಳು ಅವರುಗಳೆಂದರೆ ಗಾಳಿಹನುಮಯ್ಯ ಮತ್ತು ಆಂಜನಪ್ಪ. ಈರಯ್ಯ ಇವರಿಗೆ ದೊಡ್ಡಲಿಂಗಮ್ಮ ಎಂಬ ಮಗಳಿದ್ದಳು ಎಂದರೆ ನನಗೆ ಗೊತ್ತಿಲ್ಲ. ಅವಳನ್ನು ಚುಂಚನಕುಪ್ಪೆಗೆ ಕೊಟ್ಟು ಮದುವೆ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರು 2/3 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದು ಕೇಳಿದ್ದೆನು. ದಾವೆ ಹಾಕುವ ಸಂದರ್ಭದಲ್ಲಿ ದೊಡ್ಡಲಿಂಗಮ್ಮ ಇದ್ದರು ಎಂದರೆ ಸರಿ. ದೊಡ್ಡಲಿಂಗಮ್ಮ ಇವರ ಗಂಡ ಮತ್ತು ಮಕ್ಕಳು ಚುಂಚನಕುಪ್ಪೆಯಲ್ಲಿ ವಾಸವಿದ್ದರು ಎಂದರೆ ಗೊತ್ತಿಲ್ಲ. ನನಗೆ ಅವರ ಹೆಸರುಗಳು ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ದೊಡ್ಡಲಿಂಗಮ್ಮ ಮತ್ತು ಲಿಂಗಮ್ಮ ಇವರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ದೊಡ್ಡಲಿಂಗಮ್ಮ ರವರ ತಂಗಿ ಲಿಂಗಮ್ಮ ಇವರ ಮದುವೆಯನ್ನು ಕೆಂಗೇರಿ ಹೋಬಳಿ, ಬೈರೋಹಳ್ಳಿಗೆ ಕೊಟ್ಟು ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.ಜಯರಾಮಯ್ಯ, ಲಕ್ಷ್ಮಮ್ಮ, ಗಾಳಮ್ಮ, ಮಲ್ಲಗಮ್ಮ ಇವರು ಲಿಂಗಮ್ಮ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ. ಏಕೆಂದರೆ ನಾನು ಬಸವನಪುರದಲ್ಲಿ ಗಾಣಕಲ್ಲು ಪೋಸ್ಟ್, ಬಿಡದಿ ಹೋಬಳಿಯಲ್ಲಿ

ವಾಸವಾಗಿದ್ದೇನು, ಹಾಗಾಗಿ ನನಗೆ ಅವರ ಬಗ್ಗೆ ಯಾವುದೆ ಮಾಹಿತಿ ಇಲ್ಲ. ದ್ಯಾವಲಿಂಗಯ್ಯ ರವರ ಕುಟುಂಬದವರು ನನಗೆ ಗೊತ್ತು. ಆದರೆ ಅವರು ಯಾವಾಗ ಮದುವೆ ಆದರು, ಅವರನ್ನು ಯಾವ ಊರಿಗೆ ಕೊಟ್ಟು ಮದುವೆ ಮಾಡಿದ್ದರು ಎಂಬ ವಿಷಯ ನನಗೆ ಗೊತ್ತಿಲ್ಲ. ಲಿಂಗಮ್ಮ ಮತ್ತು ದೊಡ್ಡಲಿಂಗಮ್ಮ ರವರಎ ನಿಂಗಯ್ಯ ರವರ ವಾರಸುದಾರರು ಎಂದರೆ ಸರಿ. ನಮ್ಮ ಚಿಕ್ಕ ತಾತ ಗಂಗಯ್ಯ ಇವರಿಗೆ 4 ಜನ ಮಕ್ಕಳು ಅವರೆಂದರೆ ಗಾಳಪ್ಪ, ನಾಗರಾಜು, ಗಂಗಮ್ಮ ಮತ್ತು ಇಂದ್ರಮ್ಮ ಇರುತ್ತದೆ. ಈ ದಾವೆಯಲ್ಲಿ ಗಂಗಮ್ಮ ಮತ್ತು ಇಂದ್ರಮ್ಮ ಇವರನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ. ಅವರಿಬ್ಬರು ಈಗಲೂ ಜೀವಂತ ಇದ್ದಾರೆ ಎಂದರೆ ಸರಿ.

ನನ್ನ ತಂಗಿ ಹೇಮಲತಾ ಇವರನ್ನು ನೆಲಮಂಗಲ ತಾ. ಮೈಲಾಹಳ್ಳಿ ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದೇವೆ. ಅವರು ಇರುತ್ತಾರೆ. ದ್ಯಾವಲಿಂಗಯ್ಯ ರವರ ಎಲ್ಲ ವಂಶಸ್ಥರನ್ನು ನಾವು ವಂಶವೃಕ್ಷದಲ್ಲಿ ತೋರಿಸದೆ ಮತ್ತು ಪಾರ್ಟಿ ಮಾಡದ ನಮಗೆ ಎಷ್ಟು ಬೇಕೋ ಅಷ್ಟೇ ಜನರನ್ನು ತೋರಿಸಿ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ದ್ಯಾವಲಿಂಗಯ್ಯ ಇವರು ದೊಡ್ಡಮಾರನಹಳ್ಳಿಯಲ್ಲಿ ತೋಟಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ದ್ಯಾವಲಿಂಗಯ್ಯ ಇವರು ಜೀವಂತ ಇದ್ದಾಗ ಅವರ ಹೆಸರಿನಲ್ಲಿ ಯಾವುದೆ ಸ್ವತ್ತು ಇರಲಿಲ್ಲ ಎಂದರೆ ಸರಿಯಲ್ಲ. ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿ ದಾವಾ ಸ್ವತ್ತುಗಳಿದ್ದವು ಎಂದು ತೋರಿಸಲು ನಾನು ಆರ್ ಟಿ ಸಿ ಗಳನ್ನು ಕೊಟ್ಟಿಲ್ಲ, ಆದರೆ ಕ್ರಯಪತ್ರದಲ್ಲಿ ದ್ಯಾವಲಿಂಗಯ್ಯ ಇವರಿಗೆ ಸೇರಿದ ಸ್ವತ್ತು ಎಂದು ಬರೆದಿದೆ ಎಂದು ಸಾಕ್ಷಿ ಹೇಳುತ್ತಾರೆ. ದಾವಾ ಸ್ವತ್ತುಗಳು ದ್ಯಾವಲಿಂಗಯ್ಯ ಇವರ ಹೆಸರಿನಲ್ಲಿ ಇದ್ದವು ಎಂದು ತೋರಿಸಲು ಮೂಲ ದಾಖಲೆಗಳನ್ನು ಕೊಟ್ಟಿಲ್ಲ ಎಂಬ ಪ್ರಶ್ನೆಗೆ ನಮ್ಮ ಬಳಿ ಏನು ಇದ್ದವೋ ಅದೇ ದಾಖಲೆಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ನಾವು ಕೊಟ್ಟ ದಾಖಲೆಯಲ್ಲಿ ದ್ಯಾವಲಿಂಗಯ್ಯ ಇವರ ಹೆಸರು ಇಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**